**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 36/2022**

**ಪಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 06/08/2024.**

**ಮುಂ.ಪಾಟೀ ಸವಾಲುಃ ಶ್ರೀ ಪಿ ಎಸ್ ಎನ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

23. ನಾನು ಪ್ರತಿವಾದಿಯರ ಆಸ್ತಿಯನ್ನು ಈಗ ನೋಡಿ ಬಂದಿದ್ದು ಅವರ ಆಸ್ತಿಯ ಪೂರ್ವಕ್ಕೆ ಆಸ್ತಿ ನಂಃ777 ಅನ್ನುವ ರಸ್ತೆ ಇದೆ ಎಂದು ನುಡಿಯುತ್ತಾರೆ. ಈ ರೀತಿ ಆಸ್ತಿ ನಂಃ777 ರಲ್ಲಿ ರಸ್ತೆ ಇದೆ ಅನುನವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆಸ್ತಿ ನಂಃ777 ರ ಪೂರ್ವಕ್ಕೆ ಮತ್ತು ನಮ್ಮ ಮನೆ ನಂಃ275 ರ ಪೂರ್ವಕ್ಕೆ ಮುಖ್ಯ ರಸ್ತೆ ಇದೆ ಎಂದರೆ ಸಾಕ್ಷಿ ಮುಖ್ಯ ರಸ್ತೆನೂ ಹೌದು ಹಾಗೇಯೇ ಆಸ್ತಿ ನಂಃ777 ರಸ್ತೆ ಸಹ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳ ಪ್ರಸ್ತುತ ಸ್ಥಿತಿಗತಿಯನ್ನು ತೋರಿಸಲು ನ್ಯಾಯಾಲಯಕ್ಕೆ ಪಿಡಿಓ ಅಥವಾ ಇನ್ನಿತರ ಅಧಿಕಾರಿಗಳಿಂದ ಪಡೆದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ

ಪಿಡಿಓ ಇವರ ದಾಖಲೆ ಹಾಜರುಪಡಿಸಿರುವುದಿಲ್ಲ, ಆದರೆ ಆಸ್ತಿಯ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

24. ದಾವಾ ಆಸ್ತಿ ಅ ಶೆಡ್ಯೂಲನ ದಕ್ಷಿಣದ ಕಡೆಗೆ ಪ್ರತಿವಾದಿಯರು ಅತಿಕ್ರಮಣ ಮಾಡಲಾದ ಜಾಗ ಇದೆ ಅಂತ ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಖರೀದಿ ಪತ್ರ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಆಸ್ತಿ ಬ ದ ಪೈಕಿ ದಕ್ಷಿಣ ಕಡೆಗೆ ತೋರಿಸಿದ ರಸ್ತೆ ಎಷ್ಟು ಪೀಟು ಅಂತ ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

25. ಯರೇಬೂದಿಹಾಳ ಗ್ರಾಮದಲ್ಲಿ ಆಸ್ತಿಗಳ ಅಳತೆ ಪೂಟು ಲೆಕ್ಕದಲ್ಲಿ ಇದೆ ಎಂದರೆ ಸಾಕ್ಷಿ ಯಾರ್ಡ, ಮೊಳ ಮತ್ತು ಪೂಟುಗಳಲ್ಲಿ ಇವೆ ಎಂದು ನುಡಿಯುತ್ತಾರೆ. ಪಂಚಾಯತಿಯಲ್ಲಿ ಯಾವತ್ತಿಗೂ ಮೊಳದ ಅಳತೆ ಲೆಕ್ಕದಲ್ಲಿ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದ 2 ನೇ ಖಂಡಿಕೆಯಲ್ಲಿ ಆಸ್ತಿಯಲ್ಲಿ ಇದ್ದ ಮನೆ ಕಾಲಾಂತರದಲ್ಲಿ ಬಿದ್ದು ಅದು ಖುಲ್ಲಾ ಜಾಗೆ ಇದೆ ಅಂತ ಹೇಳಿದ್ದು ಕಾಲಾಂತರ ಅಂದರೆ ಅದು ಎಷ್ಟನೇ ಇಸ್ವಿ ಎಂದರೆ ಸಾಕ್ಷಿ ನನ್ನ ಅಜ್ಜ ಖರೀದಿಗೆ ಹಿಡಿದ ನಂತರ ಹಾಗೂ ನನ್ನ ತಂದೆ ಹಿಸ್ಸೆಗೆ ಬಂದ ನಂತರ ಎಂದು ನುಡಿಯುತ್ತಾರೆ. ನನಗೆ ಅಂದಾಜು ಇಸ್ವಿ ಹೇಳಲಾಗುವುದಿಲ್ಲ. ಅದೇ ರೀತಿದಕ್ಷಿಣದ ಗೋಡೆ ಕಾಲಾಂತರದಲ್ಲಿ ಬಿದ್ದಿರುವ ಬಗ್ಗೆ ಹೇಳಿದ್ದು ಅದು ಯಾವ ಇಸ್ವಿಯಲ್ಲಿ ಬಿತ್ತು ಅಂತ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜಿ ಹೇಳುತಿದ್ದಳು ಎಂದು ನುಡಿಯುತ್ತಾರೆ. ಈ ರೀತಿ ಕಾಲಾಂತರದಿಂದ ಮೂಲ ಮನೆ ಮತ್ತು ಗೋಡೆ ಬಿದ್ದಿದ್ದು ಅಂತ ಹೇಳಿದ್ದು ಆ ರೀತಿ ಅದು ಬಿದ್ದಿರುವುದಿಲ್ಲ, ಅದು ಇಂದಿನವರೆಗೂ ಮನೆ ಇರುತ್ತದೆ ಎಂದರೆ ಸರಿಯಲ್ಲ.

26. ನಮ್ಮ ಮನೆ ದಾವಾ ಆಸ್ತಿ ನಂಃ275 ರ ಪಶ್ಚಿಮ ಮತ್ತು ದಕ್ಷಿಣಕ್ಕೆ ಪ್ರತಿವಾದಿಯ ಖುಲ್ಲಾ ಜಾಗೆ ಇರುವುದನ್ನು ದುರುಪಯೋಗ ಪಡಿಸಿಕೊಂಡು ಈಗ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು 2020 ರಲ್ಲಿ ಕಂಪೌಂಡ ಕಟ್ಟಿಕೊಂಡಿರುವ ಬಗ್ಗೆ ಹೇಳಿದ್ದು ಆ ಬಗ್ಗೆ ಏನಾದರು ನೀವು ತಕರಾರು ವೆಗೈರೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ತಕರಾರನ್ನು ನಾನು ಹಿರಿಯರ ನಡುವೆ ಮತ್ತು ಗ್ರಾಮ ಪಂಚಾಯತಿನಲ್ಲಿ ಮಾಡಿರುತ್ತೇನೆ. 2020 ರಲ್ಲಿ ಆಗಲೀ ಎಂದಿಗೂ ಸಹ ಅತೀಕ್ರಮಣ ಮಾಡಿದ ಪ್ರಶ್ನೇಯ ಉದ್ಭವ ಆಗುವುದಿಲ್ಲ ಎಂದರೆ ಸಾಕ್ಷಿ ಅವರದ್ದು ದೊಡ್ಡ ಆಸ್ತಿ ಇದೆ, ಹಾಗಾಗೀ ನಮ್ಮ ಆಸ್ತಿಯ ಎತ್ತಿಹಾಕುವ ಉದ್ದೇಶದಿಂದ ಅತೀಕ್ರಮಣ ಮಾಡಿದ್ದಾರೆ ಎಂದು

ನುಡಿಯುತ್ತಾರೆ.

27. ದಕ್ಷಿಣ ಭಾಗದ ಗೋಡೆಗೆ ಕಿಡಿಕಿ ಇರುವುದನ್ನು ದುರುಪಯೋಗಪಡಿಸಿಕೊಂಡು ಅದರ ಬಾಜು 777 ರಸ್ತೆ ಇದೆ ಅಂತ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ನಮ್ಮದೇ ಆಸ್ತಿ ಇದೆ ಹಾಗೂ ಅದನ್ನು ಪ್ರತಿವಾದಿ ಅತೀಕ್ರಮಣ ಮಾಡಿದ್ದಾರೆ ಅಂತ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು ಕುಂದಗೋಳ**

**ಕುಂದಗೋಳ.**